ಕಥಕಳಿಯ ದಂತಕಥೆಯೆಂದೇ ಪ್ರಸಿದ್ಧರಾದ ಹಿರಿಯ ಕಲಾವಿದ ಗೋಪಿ ಆಶಾನ್ ಶಾಸ್ತ್ರೀಯ ಕಲಾ ಪರಂಪರೆಯ ಕೈದೀವಿಗೆಯಂತೆ ಬೆಳಕು ತೋರುವವರು. ಅವರ ಪೂರ್ಣ ಹೆಸರು ವಡಕ್ಕೆ ಮನಾಲತ್ ಗೋವಿಂದನ್ ನಾಯರ್. ಪಾಲಕ್ಕಾಡ್‌ನ ಕೋತಚಿರ ಅವರ ಹುಟ್ಟೂರು. ತ್ರಿಶೂರ್‌ನ ವಳ್ಳತ್ತೋಳ್ ನಗರದಲ್ಲಿರುವ ಕಥಕಳಿಯ ಪ್ರಾತಿನಿಧಿಕ ಸಂಸ್ಥೆ 'ಕಲಾಮಂಡಲಂ'ಗೆ ವಿದ್ಯಾರ್ಥಿಯಾಗಿ ಸೇರಿ, ಅಧ್ಯಾಪಕರಾಗಿ ದುಡಿದು, ಪ್ರಾಂಶುಪಾಲರಾಗಿ ಮಾರ್ಗದರ್ಶನ ಮಾಡಿದವರು. ಬಡತನ, ಕಠಿಣ ಪರಿಶ್ರಮದ ಹಾದಿಯಲ್ಲಿ ಹೊಸ ಅವಕಾಶಗಳ ಹೆಬ್ಬಾಗಿಲನ್ನು ದಾಟಿಕೊಂಡು ಬೆಳೆದ ಅವರ ವ್ಯಕ್ತಿತ್ವ ಸಾಧನೆಯ ಹಂಬಲವುಳ್ಳವರಿಗೆ ಒಂದು ಮಾದರಿ. ಭಾರತ ಸರ್ಕಾರವು ಅವರಿಗೆ ಪದ್ಮಶ್ರೀ ಪ್ರದಾನ ಮಾಡಿ ಗೌರವಿಸಿದೆ. ಕಲಾಪ್ರೇಮಿಗಳು ಅವರನ್ನು 'ಆಶಾನ್' (ಗುರುವರ್ಯ) ಎಂದು ಕರೆದು ಪ್ರೀತ್ಯಾದರಗಳನ್ನು ತೋರಿದ್ದಾರೆ. ರಂಗದ ಮೇಲೆ 'ಪಚ್ಚೆವೇಷಗಳ ದೊರೆ'ಯೆಂದು ಮೆರೆದ ಅವರು ತ್ರಿಶೂರ್ ನಗರದ ಬಳಿಯ ಮುಂಡೂರಿನಲ್ಲಿ ಸರಳ ಜೀವನ ನಡೆಸು ತ್ತಿದ್ದಾರೆ. ಅವರೊಡನೆ 'ಲಲಿತ ಮಂಟಪ' ಸರಣಿಗಾಗಿ ನಡೆಸಿದ 'ಮಯೂರ' ಮಾತುಕತೆಯ ಸಾರಾಂಶ ಇಲ್ಲಿದೆ.

◆ **ಶಾಸ್ತ್ರೀಯ ಕಲಾಪ್ರಕಾರವಾದ ಕಥಕಳಿ ಎಂಬ ನದಿಯಲ್ಲಿ ಹೊಸನೀರು ಹರಿಯಲು ಕಾರಣರಾದವರು ನೀವು. ಪರಂಪರೆಯನ್ನು ಪ್ರೀತಿಸುತ್ತ, ಹೊಸತನವನ್ನು ಹೇಗೆ ಬರಮಾಡಿಕೊಂಡಿರಿ?**

ನಮ್ಮದು 'ಕಲ್ಲುವಳಿ' ಸಂಪ್ರದಾಯ. ಯಕ್ಷಗಾನದಲ್ಲಿ ತೆಂಕು, ಬಡಗು ಶೈಲಿಗಳಿದ್ದ ಹಾಗೆ ಕಥಕಳಿಯಲ್ಲಿ ತೆಕ್ಕನ್ (ಕಪ್ಲಿಂಗಾಡನ್), ವಡಕ್ಕನ್ (ಕಲ್ಲಡಿಕೋಡನ್) ಪರಂಪರೆಗಳು ಇವೆ. ವಡಕ್ಕನ್ (ಬಡಗು) ಪದ್ಧತಿ ತಾಂತ್ರಿಕ ಅಂಶಗಳಿಗೆ, ಆಚರಣೆಗಳಿಗೆ ಹೆಚ್ಚಿನ ಒತ್ತು ನೀಡಿದರೆ, ತೆಕ್ಕನ್ (ತೆಂಕು) ಶೈಲಿಯಲ್ಲಿ ಕಥಾವಸ್ತು ಮುಖ್ಯವಾಗುತ್ತದೆ. ಬಡಗು ಅತ್ಯಂತ ಕ್ಲಿಷ್ಟಕರವಾದದು; ವಿಹಿತಾಚರಗಳನ್ನು ತಪ್ಪದೆ ಪಾಲಿಸಬೇಕು. ಇದರಲ್ಲಿ ತರಬೇತಿ ಪಡೆದು ಹೊರಗೆ ಬರುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಆದರೆ, ತೆಂಕು ಪದ್ಧತಿಯನ್ನು ಅನುಸರಿಸಿ ಕಲಾವಿದನಾಗುವುದು ಸರಳ. ಈ ಎರಡು ವಿಭಿನ್ನ ಪರಂಪರೆಗಳ ಉತ್ತಮ ಮೌಲ್ಯಗಳನ್ನು ಆಯ್ದು, ಹೊಸದೊಂದು ಶೈಲಿಯನ್ನು ರೂಪಿಸಿದವರು, ಖ್ಯಾತ ಕಥಕಳಿ ಭಾಷ್ಯಗಾರ, ಪಟ್ಟಿಕ್ಕಾಮ್ತೋಡಿ ರಾವುಣ್ಣಿ ಮೆನನ್. ಇವರ ಶಿಷ್ಯರಾದ ಕಲಾಮಂಡಲಂ ಪದ್ಮನಾಭನ್ ನಾಯರ್ ಮತ್ತು ಕಲಾಮಂಡಲಂ ರಾಮನ್ ಕುಟ್ಟಿ ನಾಯರ್ ಈ ಶೈಲಿಯನ್ನು ಹೆಚ್ಚು ಜನಪ್ರಿಯಗೊಳಿಸಿದರು. ಈ ಶೈಲಿಯ ಹೆಸರೇ ಕಲ್ಲುವಳಿ. 'ಕಲಾಮಂಡಲಂ' ಸ್ಥಾಪನೆಯಾದ ಮೇಲೆ ಈ ಶೈಲಿಗೆ ಹೆಚ್ಚು ಮನ್ನಣೆ ಲಭಿಸಿತು. ಕಥಕಳಿಯನ್ನು ಜನಸಾಮಾನ್ಯರಿಗೆ ತಲುಪಿಸಲು ಬೇಕಾಗುವ ಎಲ್ಲ ಅಂಶಗಳನ್ನು ಈ ಪದ್ಧತಿ ಒಳಗೊಂಡಿದೆ. ಪದ್ಮನಾಭನ್ ನಾಯರ್ ಹಾಗೂ ರಾಮನ್ ಕುಟ್ಟಿ ನಾಯರ್ ಅವರುಗಳ ನೆಚ್ಚಿನ ಶಿಷ್ಯನಾದ್ದರಿಂದ ನನಗೆ ಆ ಪದ್ಧತಿ ಸಹಜವಾಗಿ ಒಲಿದು ಬಂತೇನೋ. ನನಗೆ ನಾಟ್ಯಧರ್ಮಿ ಮತ್ತು ಲೋಕಧರ್ಮಿಯ ಪ್ರಮಾಣಗಳೆಷ್ಟಿರಬೇಕು ಎಂಬ ಜಿಜ್ಞಾಸೆಯೊಂದು ಸದಾ ಕಾಡುತ್ತಿತ್ತು. ನಾಟ್ಯಧರ್ಮಿಯ ಬಿಗುವನ್ನು ಸಡಿಲಿಸದೇ, ಲೋಕಧರ್ಮಿಯ ವಿಚಾರಗಳನ್ನು ಅಳವಡಿಸಿದಲ್ಲಿ ಕಲೆಯು ಸಮಕಾಲೀನ ರಸಿಕವರ್ಗವನ್ನು ಮುಟ್ಟುವುದು ಸುಲಭವಾಗುತ್ತದೆ. ಇದು ಸರಳ ಪ್ರಕ್ರಿಯೆಯಲ್ಲ. ಪರಂಪರೆಯ ಘನತೆಗೆ ಪೆಟ್ಟು ಬೀಳದಂತೆ ಅಭಿನಯಕ್ಕೆ ಹೆಚ್ಚು ಒತ್ತು ನೀಡಿ, ವಾಚಿಕಾಭಿನಯವನ್ನು ಆಂಗಿಕಾಭಿನಯವನ್ನಾಗಿ ಪರಿವರ್ತಿಸಿ, ಪ್ರೇಕ್ಷಕನ ಮನ ಗೆಲ್ಲುವ ರೀತಿಯಿದು. ಪ್ರೇಕ್ಷಕರನ್ನು ಸೆಳೆಯಲು ಚಿಕ್ಕಪುಟ್ಟ ತಂತ್ರಗಳನ್ನುಕಲಾವಿದ ಮಾಡಬೇಕಾಗುತ್ತದೆ. ಆದರೆ ಅದುವೇ ಪ್ರಧಾನವಾಗಿಬಿಟ್ಟರೆ ಕಲೆ ನಾಶವಾಗುತ್ತದೆ. ಆದುದರಿಂದ, ಕಥಕಳಿ ಎಂಬ ತೀರಾ ಕಟ್ಟುನಿಟ್ಟಿನ ಶಾಸ್ತ್ರೀಯ ಕಲೆಯನ್ನು ತುಸುವೇ ಆಧುನಿಕಗೊಳಿಸಿ, ಜನಸಾಮಾನ್ಯರನ್ನು ಕಥಕಳಿ ಕ್ಷೇತ್ರಕ್ಕೆ ಕರೆತರಬೇಕೆಂಬ ಪ್ರಯತ್ನ ಮಾಡಿದೆ. ಗುರುವಾಯೂರಪ್ಪನ ಕೃಪೆಯಿಂದ ನನ್ನ ಪ್ರಯತ್ನಕ್ಕೆ ಒಳ್ಳೆಯ ಪ್ರೋತ್ಸಾಹ ಸಿಕ್ಕಿತು.

◆ **ನಿಮ್ಮ ಬಾಲ್ಯದ ಹೇಗಿತ್ತು?**

ಎಲ್ಲರ ಬಳಿಯೂ ಬಾಲ್ಯದ ನೆನಪುಗಳು ಸುಂದರವಾಗಿರುತ್ತವೆ, ಶ್ರೀಮಂತವಾಗಿರುತ್ತದೆ. ಆದರೆ